ಎಷ್ಟು ಹೊತ್ತು ಕಳೆದರೂ ಇನ್ನೂ ಬುಸುಗುಡುವ ಚಂದ್ರಿಕಾ ಸೋಪಿನ ಪರಿಮಳ, ತೊಳೆದ ಬಟ್ಟೆ ಸರಿಯಾಗಿ ಒಣಗದೆ ಹಬ್ಬಿಸುತ್ತಿರುವ ಮುಗ್ಗಿದ ವಾಸನೆ. ಕೊಂಕಣ ಎಕ್ಸ್‌ಪ್ರೆಸ್ಸಿನ ವಾಸನೆಯ ಅಬ್ಬರಕ್ಕೆ ಅಂತೂ ಇಂತೂ ಕಷ್ಟಪಟ್ಟು ಹೊಟ್ಟೆಗಿಳಿದ ನಾಲ್ಕು ಕೂಳು ಕೂಡ ಗಿರ್ಮಿಟ್ಟಿನಂತೆ ತಿರುಗಿ ತಿರುಗಿ ಆಚೆ ಬರುವಂತಾಗುತ್ತಿತ್ತು ಪುರುವಿಗೆ.

ಪುರುವಿನ ಎದುರು ಕುಳಿತಿದ್ದ ನೀಲಿ ಪ್ಯಾಂಟಿನವ, ಗಾಳಿಯಿಂದಾಗಿ ಕಾರ್ಯಭ್ರಷ್ಟ ಸೆರಗು ಬುರ್ರನೆ ಉಬ್ಬಿ ಹಾರುತ್ತಿರುವಾಗ ಕಂಡ ಬದಿಗೆ ಕುಂತವಳ ಸಪಾಟು ಹೊಟ್ಟೆಯನ್ನು, ರೈಲಿನ ಕುಲುಕಾಟಕ್ಕೆ ಗಲಗಲ ಅಲಗುತ್ತ ತೊನೆಯುತ್ತಿರುವ ಸೀರೆಯ ಬಣ್ಣಕ್ಕೆ ಹೊಂದಿಕೆಯೇ ಆಗದ ಪಲಕದೊಳಗಿನ ಉಬ್ಬಿದ ಕುಚಗಳನ್ನು ವಾರೆಗಣ್ಣಲ್ಲಿ ನೋಡಿ, ಮತ್ತೆಮತ್ತೆ ನೋಡಿ ಮಜಾ ತೆಗೆದುಕೊಳ್ಳುತ್ತಿದ್ದದ್ದು ಅವನ ತೆಳುವಾದ ವಾರೆಗಣ್ಣುಗಳೇ ಹೇಳುತ್ತಿದ್ದವು.

ಏನನ್ನೋ ನೋಡುತ್ತಾ ಯಾವುದೋ ಲೋಕದಲ್ಲಿ ಲೀನವಾಗಿದ್ದ ನೀಲಿ ಪ್ಯಾಂಟಿನವ, ಇದ್ದಕ್ಕಿದ್ದಂತೆ ಉಕ್ಕುಕ್ಕಿ ಬಂದ ಒತ್ತಡವನ್ನು ತಡೆಯಲಾರದೆ ಬಾಯಿಯನ್ನು ಅಬಗೊತ್ತಿಕೊಂಡು ಬಚ್ಚಲಿಗೆ ಓಡಲು ಅನುವಾಗುತ್ತಿದ್ದಂತೆಯೇ ಗಂಟಲವರೆಗೂ ಒತ್ತಿಕೊಂಡು ಬಂದ ಅನ್ನ ಹುಳಿಗಳೆಲ್ಲ ಕೈಯ ತಡೆಗೋಡೆಗೂ ಜಗ್ಗದೆ ರಭಸದಿಂದ ವಾಂತಿಯಾಗಿ ಹೊರಬಂದೇ ಬಿಟ್ಟಿತು. ಬೋಗಿಯಲ್ಲಿ ಅದಾಗಲೇ ಆಧಿಪತ್ಯ ಸಾಧಿಸಿ ಮೆರೆಯುತ್ತಿದ್ದ ವಾಸನೆಗಳೆಲ್ಲ ಗೌಣವಾಗಿ ಕರಿಬೇವಿನ ಹುಳಿ ವಾಸನೆ ಎಲ್ಲರ ಮೂಗಿಗೂ ಪಸರಿಸಿತು. ತಮ್ಮದೇ ಜೋಜಾರದಲ್ಲಿ ಮುಳುಗಿದ್ದ ಪ್ರಯಾಣಿಕ ವೃಂದ ಒಮ್ಮೆಲೇ 'ಹಾಯ್, ಹೋಯ್, ಇಶ್ಶೀ' ಅಂತ ಉದ್ಗಾರ ತೆಗೆದು ಮೈಕೊಡವಿಕೊಂಡು ತಮಗೆ ಬಡಿದ ವಾಂತಿಯನ್ನು ತೊಳೆದುಕೊಳ್ಳಲು ತಮ್ಮ ತಮ್ಮ ಹಣೆಯಬರಹವನ್ನು ಹಳಿದುಕೊಳ್ಳುತ್ತ ಬಚ್ಚಲಿಗೆ ಸಾಲುಗಟ್ಟಿದರು.

ಹೆಂಡತಿ ಬಡಿಸಿದ್ದ ಹುಳಿಯನ್ನ ತಿಂದು ಬಂದಿರಬಹುದಾಗಿದ್ದ ನೀಲಿ ಪ್ಯಾಂಟಿನವ ತನ್ನ ಬಟ್ಟೆಗೆ ಬಡಿದ ವಾಂತಿಯನ್ನೆಲ್ಲ ಚೊಕ್ಕದಾಗಿ ತೊಳೆದುಕೊಂಡು ಬಂದು ಅಪರಾಧಿಯಂತೆ ಕುಳಿತ.

ಪುರು ರೈಲಿನೊಳಗಿನ ವಿದ್ಯಮಾನಕ್ಕೂ ತನಗೂ ಸಂಬಂಧವಿಲ್ಲವೆಂದು ಮಗುಮ್ಮಾಗಿ ಕುಳಿತಿದ್ದರೂ ಅವನಿಗೇ ಅರಿಯದಂತೆ ರೈಲಿನ ವರ್ತಮಾನದಲ್ಲಿ ಕರಗಿದ್ದ.

ಕುಲುಕಿದ ಸರೋವರದಂತಾಗಿದ್ದ ಬೋಗಿ ಸಮಯ ಕಳೆಯುತ್ತ ಮತ್ತದೇ ಕುಲುಕಾಟಕ್ಕೆ, ಪ್ರಯಾಣಿಕರ ಹರಟೆಗೆ, ಬೇಡವೆಂದರೂ ಅಡರುವ ವಾಸನೆಗೆ ಒಗ್ಗಿಕೊಂಡಿತು.

ಈ ಬಾರಿ ದಾದಾ ಕಳಿಸಿದ ತಾರು ತಲುಪಿದ ತಕ್ಷಣವೇ ಪುರು ಹೊರಟಿದ್ದು ಹೌದು. ಪುರು ಮುಂಬೈ ಸೇರಿದ ಮೊದಮೊದಲಿಗೆ ದಾದಾನ ಜೊತೆ ಫೋನಿನಲ್ಲಿ ಮಾತನಾಡಲೂ ಹಿಂದೆ ಮುಂದೆ ಯೋಚಿಸಿ ಅಂತೂ ತಿಂಗಳಿಗೊಂದಾವರ್ತಿ ಮಾತನಾಡಿದರೆ ಉಂಟು ಇಲ್ಲದಿದ್ದರೆ ಅದೂ ಇಲ್ಲ. ವಿಳಾಸ ಕೊಡು, ಊರಿಗೆ ಬಾ, ಮದುವೆಯಾಗು ಅಂತ ದಾದಾ ಅಮ್ಮ ದುಂಬಾಲು ಬಿದ್ದರಂತೂ ತಿಂಗಳಿಗೆಲ್ಲೋ ಬರುತ್ತಿದ್ದ ಅಪರೂಪದ ಫೋನೂ ಖೈದು. ಎಲ್ಲಿಯೋ ಒಂದು ಕಡೆ ಮಗ ಬದುಕಿದ್ದಾನಲ್ಲ ಎಂಬ ತೃಪ್ತಿಯೊಂದೇ ಪುರುವಿನ ತಂದೆತಾಯಿಗೆ.

ಅಮ್ಮ ನೋಡಿದ ಹುಡುಗಿಯನ್ನು ಕಾಣುವ ಕುತೂಹಲ, ದಾದಾ, ಅಮ್ಮನನ್ನು ನೋಡುವ ತವಕಕ್ಕಿಂತಲೂ ತಾನು ಮತ್ತು ಶೇಖರ ಓಡಾಡಿದ ಕುಡ್ತಗಿ ಬೈಲು, ಗೇರುಬೀಜ ಕದ್ದು ಅವಿಸಿಕೊಳ್ಳಲು ಜಾಗ ತಿಳಿಯದೆ ವಯಸ್ಕರ ಸಿನಿಮಾ ನಡೆಯುತ್ತಿದ್ದಾಗ ಒಳಹೊಕ್ಕಿ ಅಡಗಿ ಕುಳಿತಿದ್ದ ಕುಮಟೆಯ ಚಿತ್ತರಂಜನ ಟಾಕೀಸು, ಮತ್ತು... ಮತ್ತದೇ ವನ್ನಳ್ಳಿ ಬೀಚು ಇವುಗಳನ್ನೆಲ್ಲಾ ಒಮ್ಮೆ ನೋಡಿಬರಬೇಕು ಎನ್ನಿಸಿದ್ದಕ್ಕೆ ಮೊನ್ನೆಯ ತಾರು ನೆಪ ಒದಗಿಸಿತ್ತು. ವನ್ನಳ್ಳಿ ಬೀಚಿನ ನೆನಪು ಹತ್ತಿ ನೆತ್ತಿಗೇರಿದ್ದೇ ಮೈನಡುಗಿ